

ಪ್ರೊ. ಜಿ. ವೆಂಕಟಸುಬ್ಬಯ್ಯನವರೊಂದಿಗೆ ಎ.ಎನ್. ಮೂರ್ತಿ ರಾವ್

ಆ ಆಯೋಗದ ಸೂಚನೆಯಂತೆ ರಾಜ್ಯಗಳ ಪುನರ್ ವಿಂಗಡಣೆಯಾದಾಗ, ಆ ವರದಿಯನ್ನು ಸ್ವಾಗತಿಸಿ, ಆಗ ನಮಗೆ ಸೇರಿರದ ಬಳ್ಳಾರಿ, ಸಿರುಗುಪ್ಪ, ಹೊಸಪೇಟೆ, ಕಾಸರಗೋಡು, ಮಡಕಸಿರಾ ತಾಲ್ಲೂಕುಗಳನ್ನು ಕರ್ನಾಟಕಕ್ಕೇ ಸೇರಿಸಬೇಕೆಂದು ಮನವಿಮಾಡಿ ನೀಡಿದ ಪತ್ರಿಕಾ ಹೇಳಿಕೆಯನ್ನು ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ವೆಂಕಟಸುಬ್ಬಯ್ಯ ಅವರು ತಮ್ಮ ಕೈಯಲ್ಲೇ ಬರೆದಿದ್ದರು. ಅವರು ಬರೆದದ್ದು ನಿಟ್ಟೂರು ಶ್ರೀನಿವಾಸರಾಯರ ಮನೆಯಲ್ಲಿ, ಅವರ ಹೆಸರು, ವಿಳಾಸಗಳಿದ್ದ ಲೆಟರ್ ಹೆಡ್ ಹಾಳೆಗಳಲ್ಲಿ! ಅವರು ಆಗ ಬರೆದಿದ್ದ ಮೊದಲ ಕರಡು ಒಂದು ಚಾರಿತ್ರಿಕ ದಾಖಲೆಯಾಗಿ ನನ್ನ ಬಳಿ ಇದೆ. ಅದರ ಕೊನೆಯ ವಾಕ್ಯವು ಹೀಗಿದೆ: "ಈ ಮಾರ್ಪಾಡುಗಳು ಭ್ರಾತೃಭಾವದಿಂದಲೂ ಸೌಹಾರ್ದದಿಂದಲೂ ನೆರವೇರುವಂತೆ ಸಹಕಾರ ನೀಡಬೇಕೆಂದು ನೆರೆಹೊರೆಯ ಭಾಷಾಪ್ರಾಂತ್ಯಗಳ ಜನರನ್ನೂ ಅವರ ಪ್ರತಿನಿಧಿಗಳನ್ನೂ ಪರಿಷತ್ತು ನಮ್ರತೆಯಿಂದ ಬೇಡುತ್ತದೆ." (ನೋಡಿ: ಛಾಯಾಚಿತ್ರ)

ಹೀಗೆ 1954-56ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಚುಕ್ಕಾಣಿಯನ್ನು ಹಿಡಿದು ಕನ್ನಡನಾಡಿನ, ಪರಿಷತ್ತಿನಂಥ ಸಂಸ್ಥೆಯ ಹಿರಿಮೆಗೆ ಚ್ಯುತಿ ಬರದಂತೆ ಆ ಮೂವರು ಹಿರಿಯರು ಊಹಿಸಲು ಅಸಾಧ್ಯವಾದ ರೀತಿಯಲ್ಲಿ ಆಡಳಿತ ನಡೆಸಿದ್ದೂ, ಮುಂದೆ ಅವರರೆಲ್ಲರೂ ಶತಾಯುಷಿಗಳಾದದ್ದೂ ಕನ್ನಡ ನಾಡಿನ ಅದರಲ್ಲೂ ಕನ್ನಡ ಸಾಹಿತ್ಯ ಪರಿಷತ್ತಿನ ಚರಿತ್ರೆಯಲ್ಲಿ ಒಂದು ಅಪೂರ್ವ ದಾಖಲೆಯೇ ಸರಿ.

ಮೂರ್ತಿರಾಯರ ಅವಧಿಯು ಮುಗಿದಾಗ ಅಧ್ಯಕ್ಷ ಪದವಿಯನ್ನು ಇಬ್ಬರು ಸಾಹಿತಿಗಳು ಅಪೇಕ್ಷಿಸಿದಾಗ, ಮೊದಲ ಬಾರಿ ಪರಿಷತ್ತಿನಲ್ಲಿ ಚುನಾವಣೆಯನ್ನು ನಡೆಸಬೇಕಾಗಿ ಬಂದಿತು! ಆ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕಾಗಿದ್ದುದು ಎ.ಎನ್. ಮೂರ್ತಿರಾಯರು. ಅವರ ಅನುಪಸ್ಥಿತಿಯಿಂದ ನಿಟ್ಟೂರು ಶ್ರೀನಿವಾಸರಾಯರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅಭ್ಯರ್ಥಿಗಳಾಗಿದ್ದ ಶಿವಮೂರ್ತಿಶಾಸ್ತ್ರಿಗಳು ಹಾಗೂ ಅ.ನ. ಕೃಷ್ಣರಾಯರಿಗೆ ಸಮನಾದ ಮತಗಳು ಬಂದವು (ಇಬ್ಬರಿಗೂ ಬಂದದ್ದು ಬಹುಶಃ ಏಳು ಏಳು ಮತಗಳು). ಸಭಾಧ್ಯಕ್ಷರಾಗಿದ್ದ ನಿಟ್ಟೂರು ಶ್ರೀನಿವಾಸರಾಯರು ತಮಗೆ ದತ್ತವಾದ ನಿರ್ಣಾಯಕ ಮತವನ್ನು ನೀಡುವ ಅಧಿಕಾರವನ್ನು ಚಲಾಯಿಸಿದರು. ಶಿವಮೂರ್ತಿಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದರು.

●